ಒಳ್ಳೆಯದು. ಇದು ಬಹಳ ಮುಖ್ಯ. ನ್ಯಾಯಾಂಗ ತನಿಖೆ ಬೇರೆ ವಿಷಯ. Later it could be done. Immediately the Forest Minister should go there and see that it is stopped.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅರಣ್ಯ ಮಂತ್ರಿಗಳು ಆ ಸದನದಲ್ಲಿದ್ದಾರೆ. ಈಗ ಕೂರ್ಗ್ ಲ್ಯಾಂಡ್ಸ್ ಬಗ್ಗೆ ಒಂದು ಮಿಾಟಿಂಗ್ ಕೂಡ ಇತ್ತು. ಅಲ್ಲಿ ಕೆಲವು ಜನರು ಇದನ್ನು ಪ್ರಸ್ತಾಪ ಮಾಡಿದರು. ಇದರ ಬಗ್ಗೆ ವಿವರವಾಗಿ ಈ ಸದನದಲ್ಲಿ ಒಂದು ಹೇಳಿಕೆ ಮಾಡುತ್ತಾರೆ. ಆದ್ದರಿಂದ ಮಧ್ಯಾಹ್ನದ ಮೇಲೆ ಇದನ್ನು ತೆಗೆದುಕೊಳ್ಳುವುದು ಒಳ್ಳೆಯದು.

ಶ್ರೀ ಎಂ.ವಿ. ವೆಂಕಟಪ್ಪ : 13 ರಂದು ನಮ್ಮ ಪ್ರಶ್ನೆಗಳು ಕೆಲವು ಇದ್ದವು.. ಅಂದು ಪ್ರಶ್ನೋತ್ತರ ವೇಳೆಯನ್ನು ತೆಗೆದುಹಾಕಿದ್ದೀರಿ. ಶುಕ್ರವಾರ ಇದ್ದ ಪ್ರಶ್ನೆಗಳನ್ನು ಮುಂದೆ ತೆಗೆದುಕೊಳ್ಳುತ್ತೀರಾ?

ಉಪಾಧ್ಯಕ್ಷೀಣಿಯವರು : ಅವುಗಳನ್ನು ಅನ್‌ಸ್ಟಾರ್ಡ್ ಆಗಿ ಪರಿವರ್ತಿಸಿ ಇವತ್ತು ಪ್ಲೇಸ್ ಮಾಡಿದ್ದಾರೆ.

ಶ್ರೀ ಎಂ.ವಿ. ವೆಂಕಟಪ್ಪ : ನಮಗೆ ಉತ್ತರ ಬರುವುದೇ ಅಪರೂಪ. ಹೀಗಿರುವಾಗ ಪ್ರಶ್ನೆಗಳನ್ನು ಅನ್‌ಸ್ಟಾರ್ಡ್ ಮಾಡಿದ್ದಾರೆ ಹೇಗೆ? ಇನ್ನೊಂದು ದಿವಸ ಹಾಕಬಹುದಾಗಿತ್ತಲ್ಲವೆ?

ಉಪಾಧ್ಯಕ್ಷೀಣಿಯವರು : ಮುಂದೆ ಅದೇ ರೀತಿ ಮಾಡೋಣ.

ಶ್ರೀ ವಿನಯಕುಮಾರ್ ಸೊರಕೆ : ನನ್ನ ಅನ್‌ಸ್ಟಾರ್ಡ್ ಪ್ರಶ್ನೆಗೆ ಉತ್ತರ ಬಂದಿಲ್ಲ.

ನಿಯಮ 334ರ ಮೇರೆಗೆ

ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ನಿಟ್ಟೂರಿಗೆ ಆರಕ್ಷಕ ಠಾಣೆಯ ಮಂಜೂರು.

ಶ್ರೀ ಜೆ.ಎಸ್. ಶಿವನಂಜಪ್ಪ (ಗುಬ್ಬಿ): ಮಾನ್ಯ ಉಪಾಧ್ಯಕ್ಷೀಣಿಯರೆ. ತುಮಕೂರು ಜಿಲ್ಲೆ. ಗುಬ್ಬಿ ತಾಲ್ಲೂಕು. ನಿಟ್ಟೂರು ಗ್ರಾಮವು ಹೋಬಳಿ ಕೇಂದ್ರವಾಗಿದ್ದು. ಶಿರಾ. ನೆಲ್ಲಿಗೆರೆ ಮತ್ತು ಬೆಂಗಳೂರು-ಹೊನ್ನಾವರ ರಸ್ತೆಗಳು ಕೂಡುವ ಕೇಂದ್ರವಾಗಿದ್ದು. ತಾಲ್ಲೂಕಿಗೆ ದೊಡ್ಡ ವ್ಯಾಪಾರ ಕೇಂದ್ರವಾಗಿರುತ್ತದೆ. ಇತ್ತೀಚೆಗೆ ಜನ ಸಂಚಾರ ಮತ್ತು ವಾಹನ ಸಂಚಾರ ಹೆಚ್ಚಾಗಿದ್ದು. ಪ್ರತಿ ವರ್ಷ ಅನೇಕ ಅಪಘಾತಗಳು ಸಂಭವಿಸಿದ್ದು. ನೂರಾರು ಜನರ ಸಾವಿಗೆ ಕಾರಣವಾಗಿದ್ದು. ಇದರಿಂದ ಊರಿನಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ಉಂಟಾಗಿ ಗಲಭೆಗಳಿಗೆ ಕಾರಣವಾಗಿರುತ್ತದೆ. ಸುತ್ತ 8-10 ಕಿ.ಮಿಾ. ದೂರದವರೆಗೆ ಯಾವುದೇ ಆರಕ್ಷಕ ಠಾಣೆಗಳಿಲ್ಲದೆ. ಪತೋಟಿಗೆ ತರಲು ತುಂಬಾ ಶ್ರಮವಾಗಿರುತ್ತದೆ. ಇದನ್ನು ಸರಿಪಡಿಸಲು ಸದರಿ ನಿಟ್ಟೂರಿಗೆ ಒಂದು ಆರಕ್ಷಕ ಠಾಣೆ ಅವಶ್ಯಕತೆ ಇದ್ದು. ಇದಕ್ಕಾಗಿ ಮಂಡಲ ಪಂಚಾಯಿತಿಯವರು ಹಾಗೂ ಸಾರ್ವಜನಿಕರು ಅನೇಕ ಬಾರಿ ಸರ್ಕಾರಕ್ಕೆ ಒತ್ತಾಯ ತಂದಿದ್ದರೂ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಈಗಲಾದರೂ. ಸರ್ಕಾರದವರು ಆರಕ್ಷಕ ಠಾಣೆಯನ್ನು ಮಂಜೂರ್ಮಾಡಿಕೊಡಬೇಕೆಂದು ಗೃಹ ಮಂತ್ರಿಗಳನ್ನು ಒತ್ತಾಯಪೂರ್ವಕವಾಗಿ ವಿನಂತಿಸುತ್ತೇನೆ.

ಶ್ರೀ ಧರ್ಮಸಿಂಗ್ (ಗೃಹ ಸಚಿವರು) : ಮಾನ್ಯ ಉಪಾಧ್ಯಕ್ಷೀಣಿಯವರೆ. ನಾನು ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ತುಮಕೂರು ಜಿಲ್ಲೆ. ಗುಬ್ಬಿ ತಾಲ್ಲೂಕು. ನಿಟ್ಟೂರು ಗ್ರಾಮ ಹೋಬಳಿ ಕೇಂದ್ರವಾಗಿದ್ದು. ಬೆಂಗಳೂರು-ಹೊನ್ನಾವರ ರಸ್ತೆ ಕೂಡುವ ಕೇಂದ್ರ ಸ್ಥಾನವಾಗಿದ್ದು. ತಾಲ್ಲೂಕಿನ ದೊಡ್ಡ ವ್ಯಾಪಾರ

ಕೇಂದ್ರವಾಗಿದ್ದು, ಈ ಸ್ಥಳದ ಸುತ್ತ-ಮುತ್ತ 8-10 ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ಆರಕ್ಷಕ ಠಾಣೆ ಇಲ್ಲದಿರುವುದರಿಂದ ಇಲ್ಲಿ ಒಂದು ಆರಕ್ಷಕ ಠಾಣೆಯನ್ನು ತೆರೆಯಬೇಕೆಂದು ಒತ್ತಾಯಿಸಿದ್ದಾರೆ.

ಈ ಪ್ರಸ್ತಾವನೆಯನ್ನು ಬೆಂಗಳೂರು ವಿಭಾಗದ ಡಿ.ಐ.ಜಿ. ಯವರು ಪರಿಶೀಲಿಸಿದ್ದು, ಈ ಸಲಹೆಯನ್ನು ಒಪ್ಪುವುದು ಅಗತ್ಯವಾಗಿದೆಯೆಂದೂ, ಗುಬ್ಬಿ ಮತ್ತು ಚೇಳೂರು ಮತ್ತು ಕಡಬ ಔಟ್‌ಪೋಸ್ಟ್ ಸ್ಟೇಷನ್‌ಗಳ ವ್ಯಾಪ್ತಿಯಿಂದ ತಲಾ 23, 37 ಮತ್ತು 50 ಗ್ರಾಮಗಳನ್ನು ಒಟ್ಟಗೂಡಿಸಿ 20 ಕಿ.ಮೀ. ವ್ಯಾಪ್ತಿಯ 110 ಗ್ರಾಮಗಳ ಜ್ಯೂರಿಸ್‌ಡಿಕ್ಷನ್ ಗೊತ್ತುಪಡಿಸಿ ನಿಟ್ಟೂರು ಗ್ರಾಮದಲ್ಲಿ ಒಂದು ಠಾಣೆಯನ್ನು ತೆಗೆಯುವುದು ಯೋಗ್ಯವೆಂದು ಶಿಫಾರಸ್ಸು ಮಾಡಿದ್ದಾರೆ.

ಮುಂದಿನ ವರ್ಷಗಳಲ್ಲಿ 40 ಪೋಲೀಸ್ ಠಾಣೆಗಳನ್ನು ತೆರೆಯುವ ಯೋಜನೆಯೊಂದನ್ನು ಸರ್ಕಾರ ಈಗಾಗಲೇ ಪರಿಶೀಲಿಸುತ್ತಿದೆ. ನಿಟ್ಟೂರು ಗ್ರಾಮದ ಆವಶ್ಯಕತೆಯನ್ನೂ ಗಮನದಲ್ಲಿಟ್ಟುಕೊಂಡು, ಈ ಪ್ರಸ್ತಾವನೆಯನ್ನು ಮಂಜೂರಾತಿಗಾಗಿ ಪರಿಶೀಲಿಸಲಾಗುವುದು.

ಹಿಂದುಳಿದ ವರ್ಗಗಳ ಇಲಾಖೆಯವರಿಂದ ನಡೆಸುತ್ತಿರುವ ಹಾಸ್ಟೆಲ್‌ಗಳ ವಿದ್ಯಾರ್ಥಿಗಳಿಗೆ ಹಸಿರುಕಾರ್ಡ್ ಮೂಲಕ ಆಹಾರ ಪದಾರ್ಥಗಳನ್ನು ಒದಗಿಸುವುದು.

ಶ್ರೀ ಕೆ.ಎಚ್. ಹನುಮೇಗೌಡ (ಹಾಸನ) : ಸನ್ಮಾನ್ಯ ಉಪಾಧ್ಯಕ್ಷರೆ, ಇತ್ತೀಚಿನ ದಿನಗಳಲ್ಲಿ ಆಹಾರ ಪದಾರ್ಥಗಳ ಧಾರಣೆಯು ವಿಪರೀತ ಏರಿದ್ದು ಸರ್ಕಾರ ನಡೆಸುತ್ತಿರುವ ಪದವಿಪೂರ್ವ ಮತ್ತು ಪ್ರೌಢಶಾಲೆಗಳ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳ ಊಟ, ತಿಂಡಿ ವಗೈರೆಗೆ ಕೊಡುತ್ತಿರುವ ಹಣ ಬಹಳ ಕಡಿಮೆ ಇದೆ. ಸಮಾಜ ಕಲ್ಯಾಣ ಇಲಾಖೆಯವರು ನಡೆಸುತ್ತಿರುವ ಹಾಸ್ಟೆಲುಗಳ ವಿದ್ಯಾರ್ಥಿಗಳಿಗೆ ಹಸಿರು ಕಾರ್ಡ್‌ನ ಮೂಲಕ ಆಹಾರಧಾನ್ಯಗಳನ್ನು ಒದಗಿಸುತ್ತಿರುವಂತೆ ಹಿಂದುಳಿದ ವರ್ಗಗಳ ಇಲಾಖೆಯವರಿಂದ ನಡೆಸುತ್ತಿರುವ ಹಾಸ್ಟೆಲುಗಳ ವಿದ್ಯಾರ್ಥಿಗಳಿಗೂ ಹಸಿರು ಕಾರ್ಡ್ ಮೂಲಕ ಆಹಾರ ಪದಾರ್ಥಗಳನ್ನು ಒದಗಿಸುವಂತೆ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಸನ್ಮಾನ್ಯ ಉಪಾಧ್ಯಕ್ಷರೆ, ಕೆಲವು ಹಾಸ್ಟೆಲ್‌ಗಳಲ್ಲಿ ಕಾಫಿ ನಿಲ್ಲಿಸಿಬಿಟ್ಟಿದ್ದಾರೆ. ಊಟ ನಿಲ್ಲಿಸಿಬಿಟ್ಟಿದ್ದಾರೆ. ಇನ್ನು ಕೆಲವು ಹಾಸ್ಟೆಲ್‌ಗಳಲ್ಲಿ ಮಕ್ಕಳಿಗೆ ಕೊಡತಕ್ಕ ಆಹಾರ ಹೊಟ್ಟೆ ತುಂಬುವುದಿಲ್ಲ ಎಂದು ಹೇಳಿದರು. ದುಡ್ಡು ಜಾಸ್ತಿ ಮಾಡಬೇಕು. ಇಲ್ಲವೇ ಕಡಿಮೆ ರೇಟ್‌ನಲ್ಲಿ ಆಹಾರಧಾನ್ಯಗಳನ್ನು ಒದಗಿಸುವುದಕ್ಕೆ ಸರ್ಕಾರ ಏರ್ಪಾಡು ಮಾಡಬೇಕು. ಇಲ್ಲದೇ ಇದ್ದರೆ ನಿರ್ಭಾಗ್ಯ ಮಕ್ಕಳಿಗೆ ತೊಂದರೆಯಾಗುತ್ತದೆ.

ಶ್ರೀ ಎಂ. ಬ್ಲೇಸಿಯಸ್ ಡಿಸೌಜ (ಕಾನೂನು ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಕೆ.ಎಚ್. ಹನುಮೇಗೌಡ : ಏನು ಸ್ವಾಮಿ? ನೀವು ವ್ಯವಸ್ಥೆ ಮಾಡಿಸಿ. ಉತ್ತರ ಕೊಡದಿದ್ದರೂ ಚಿಂತೆ ಇಲ್ಲ. ಮಕ್ಕಳ ಮೇಲೆ ಕನಿಕರ ಇಟ್ಟಕೊಂಡು ಮಕ್ಕಳಿಗೆ ಹೊಟ್ಟೆತುಂಬ ಊಟ, ತಿಂಡಿ ಕೊಡುವ ವ್ಯವಸ್ಥೆ ಮಾಡಿ.